'ಸುಧಾ'ಕ್ಕೆ ಕಳಿಸಿದೆ. ಒಂದು ವಾರದಲ್ಲೆ ಎಂ.ಬಿ. ಸಿಂಗ್ ಅವರ ಉತ್ತರ ಬಂತು. ನಾವೀಗ ಅದನ್ನ ಹಾಕ್ತೇವೆ. ಆದ್ರೆ ಸ್ವಲ್ಪ ಉದ್ದ ಇದೆ. ಮತ್ತೆ ಇದ್ರಲ್ಲಿ ನಾನು stream of consciousness ಟೆಕ್ನಿಕ್(ಪ್ರಜ್ಞಾ ಪ್ರವಾಹ ತಂತ್ರ) ಬಳಸಿದ್ದೇನೆ. ಅದು ನಮ್ಮ ಓದುಗರಿಗೆ ಅರ್ಥ ಆಗ್ಲಿಕ್ಕಿಲ್ಲ. ನಮ್ಮ ಓದುಗರು ಅಂದ್ರೆ ಜನಸಾಮಾನ್ಯರು. ಹೆಚ್ಚು ಪ್ರಬುದ್ಧರೆಂದು ಭಾವಿಸಬಾರದು. ಇದನ್ನ ಸ್ವಲ್ಪ ಸಣ್ಣದು ಮಾಡಿಕೊಡಿ ಅಂದ್ರು. ನಾನು ಹೇಳಿದೆ, ಸಣ್ಣದು ಮಾಡ್ಲಿಕ್ಕೆ ಸಾಧ್ಯವೆ ಇಲ್ಲ ಅದನ್ನು. ನೀವು ಬೇಕಿದ್ರೆ ಮಾಡಿ, ಸಣ್ಣದು ಮಾಡ್ಲಿಕ್ಕೆ ಸಾಧ್ಯವಿಲ್ಲ ಅಂತ. ಅಲ್ಲ ಇದನ್ನ ಹಾಕ್ಲೆ ಬೇಕು ನಮಗೆ, ಬಹಳ ಚೆನ್ನಾಗಿದೆ ಕಾದಂಬರಿ. ಆದ್ರಿಂದ ನೀವು ನೋಡಿ ಒಂದ್ಸಲ, ಸ್ವಲ್ಪ ಸಣ್ಣದು ಮಾಡಿ ಅಂತ ಕಳಿಸಿದ್ರು. ಇಡಿ ಸ್ಕ್ರಿಪ್ಟ್ ಬಂತು. ನಾನದರಲ್ಲಿ ಆ ಪ್ರಜ್ಞಾ ಪ್ರವಾಹ ತಂತ್ರ ಏನಿದೆ, ಚಾಪ್ಟರ್ ಚಾಪ್ಟರ್ ಬರ್ತದೆ ಅದು, ಒಂದು ಟೆಕ್ನಿಕ್ನಿಂದ ಬರ್ದಿದ್ದೇನೆ ನಾನದನ್ನ, ತಂತ್ರ ಉಪಯೋಗಿಸಿದ್ದೇನೆ. ಆ ಚಾಪ್ಟರ್ ಫುಲ್ ಕಟ್ ಮಾಡಿಬಿಟ್ಟೆ. ಕಟ್ ಮಾಡಿಬಿಟ್ಟು ಹಾಕಿ ಅಂತ ಹೇಳಿದೆ. ಅದು ಯಾರೊಬ್ಬರಿಗೂ ಗೊತ್ತಾಗಲಿಲ್ಲ. ಪ್ರಜ್ಞಾ ಪ್ರವಾಹ ತಂತ್ರ ಮನುಷ್ಯನ ಭಾವನೆಗಳನ್ನ ವ್ಯಕ್ತಪಡಿಸುತ್ತಾ ಹೋಗುವಂಥ ಒಂದು ತಂತ್ರ. ಅದು ಸ್ವಲ್ಪ ಹೊರಗೆ ನಿಲ್ತದೆ. ಆದ್ರೆ ಅದರಲ್ಲಿ ಯಾವುದೋ ಸಂಭವಗಳಿಗೆ ಜೋಡಿಕೊಂಡಿರ್ತದೆ ಅದು. ಅದು ಉಳಿದವರಿಗೆ ಗೊತ್ತಾಗ್ಲಿಲ್ಲ. ಆದ್ರಿಂದ ಅದು ಚೆನ್ನಾಗಿ ಬಂತು. ಮುಂದೆ ಅದನ್ನ ಬಾಪ್ಕೊ ಪ್ರಕಾಶನದವರು ಪ್ರಕಟಿಸಲಿಕ್ಕೂ 'ಸುಧಾ'ದವರೇ ಕಾರಣರಾದ್ರು. ಅದು ಪ್ರಕಟವಾಗುವಾಗ ನಾನು ಇಥಿಯೋಪಿಯದಲ್ಲಿದ್ದೆ. ಸುಮತೀಂದ್ರ ನಾಡಿಗರು, ಆಗ ಅಮೆರಿಕದಲ್ಲಿ ಪಿಎಚ್.ಡಿ. ಮಾಡ್ತಾ ಇದ್ರು. ಅವ್ರು ಕಾಗದ ಬರೆದು ತಿಳಿಸಿದ್ರು. ಹಾಗೆ ಅಲ್ಲಿಂದ ನಾನು ಹೇಗೂ ಎಂ.ಬಿ. ಸಿಂಗ್ ಇದ್ದಾರಲ್ಲ ಅಂತೇಳಿ ಸುಮಾರು ಆರೇಳು ಕಾದಂಬರಿಗಳನ್ನ ಅಲ್ಲಿ ಕೂತ್ಕೊಂಡು, ಅಲ್ಲೇ ಬರೆದಿದ್ದು. ಒಂದರನಂತ್ರ ಒಂದು 'ಕರ್ಮಣ್ಯೇ ವಾಧಿಕಾರಸ್ತೇ', 'ಅಬ್ರಾಹ್ಮಣ' ಪ್ರತಿಯೊಂದು ಸಹ ಅಲ್ಲಿಂದ ಬರೆದಿದ್ದು. ಬಾಪ್ಕೊದವರೆ ಪ್ರಕಟ ಮಾಡಿದ್ದು. ಹಾಗೆ ನನಗೆ ಪ್ರಕಾಶಕರು ಯಾರು ಅಂದ್ರೆ 'ಸುಧಾ' ಪತ್ರಿಕೆಯೇ. ಆನಂತರ ನಾನಿಲ್ಲಿ ಬಂದ ಮೇಲಿನ ಅನುಭವಗಳನ್ನ ಹೇಳ್ಲಿಕ್ಕೋದ್ರೆ ದಿನಗಟ್ಟಲೆ ಹೇಳ್ಬೇಕಾಗ್ತದೆ. ಇಲ್ಲಿ ಬಂದ್ಮೇಲೆ ಪ್ರಕಾಶಕರೆಲ್ಲ ಸಿಕ್ಕಿದ್ರು. ಪ್ರಕಾಶನ ಮಾಡಿದ್ರು, ನಡೀತು. ಹೊಸ ಹೊಸ ಪ್ರಕಾಶಕರು, ಸ್ನೇಹಿತರು, ಹಣಕೊಡುವವರು, ಕೊಡದವರು, ಓಡಿ ಹೋಗುವವರು ಎಲ್ಲಾ ನಮೂನೆಯವರ ಸಂಪರ್ಕ ಆಯ್ತು.

'ತರಂಗ' ಪತ್ರಿಕೆ ಆರಂಭ ಆದಾಗ ಅದರ ಸಂಪಾದಕರಾದ ಸಂತೋಷಕುಮಾರ ಗುಲ್ವಾಡಿಯವರು ಹೇಳಿದ್ರು, ನಿಮ್ಮ ಕಾದಂಬರಿ ನಾವು ಮೊದಲು ಹಾಕ್ತೇವೆ ಅಂತ. ಆಗ ನಾನು ಹೇಳಿದೆ, ನನ್ನ ಕಾದಂಬರಿ ಮೊದಲು ಹಾಕುವುದು ಬೇಡ. ಅಂದ್ರೆ ಅಷ್ಟರವರೆಗೆ ಸೀರಿಯಲೈಸಿಂಗ್ ಆರಂಭವಾಗಿರಲಿಲ್ಲ. ಟಿ.ಕೆ. ರಾಮರಾವ್ ಅವರದ್ದೇ ಹಾಕಿ. ನನ್ನ ಕಾದಂಬರಿ ಹಾಕಿ ಅದು ಹಾಳಾಯ್ತು ಅಂತ ಆಗುವುದು ಬೇಡ ಅಂತ. ಯಾಕಂದ್ರೆ, ನನ್ನ ಕಾದಂಬರಿ ಆಗಲೇ ನಾನು ಬರೆದದ್ದು ಅದು ಪ್ರಯೋಗ ಅಂತ ಹೇಳಿದ್ದೆ ನಾನು. ಅದೊಂದು ರಾಜಕೀಯ ಕಾದಂಬರಿ ಮತ್ತದು ಸೆಟಾಯರ್ ಆಗಿರ್ತದೆ. ವ್ಯಂಗ್ಯವಾಗಿರ್ತದೆ. ಅದರಿಂದ ಓದುಗರು ಮತ್ತೆ ನಮ್ಗೆ ಓದುಗರು ಕಡಿಮೆಯಾದ್ರು ಅಂತಾಗುವುದು ಬೇಡ. ಅವ್ರದೇ ಹಾಕಿ ಅಂದೆ. 'ಕೆಂಪುಮಣ್ಣು' ಅಂತ ಅವರ ಕಾದಂಬರಿ ಬಂತು. ಆನಂತರ ಇದನ್ನು ಹಾಕಿದ್ರು. ಇದನ್ನು ಹಾಕಿ ಒಂದು ಎರಡು ಮೂರು ವಾರ ಆಗುವಾಗ ಓದುಗರ ಪ್ರತಿಕ್ರಿಯೆಗಳು ಬರತೊಡಗಿದವು. ಇದು ನಮಗೆ ಅರ್ಥ ಆಗ್ತಾ ಇಲ್ಲ. ಈ ಭಾಷೆ ಏನು ಅಂತ ತಿಳೀತಾ ಇಲ್ಲ ಅಂತ ಹೇಳತೊಡಗಿದರು. ನಿಮಗೆ ಗೊತ್ತಿರಬಹುದು, ತಬಾರ ಗಿಬಾರ ಅಂತೆಲ್ಲ ಬರ್ತದೆ, ಹದೇಲಿ ಅಂತ ಬರ್ತದೆ. ಉದ್ದೇಶ ಇಷ್ಟೆ, ಸತ್ಯವನ್ನೇ ಹೇಳ್ತಾ